# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸ್ಥಳನಿಯುಕ್ತಿಗೊಳಿಸಿದ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಸರ್ಕಾರದ ಆದೇಶವನ್ನು ಉಲ್ಲಂಘಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ದಂಡನೆಯನ್ನು ವಿಧಿಸುವ ಬಗ್ಗೆ.

**ಓದಲಾಗಿದೆ:**
1. ಲೋಕೋಪಯೋಗಿ ಇಲಾಖೆ ಅಧಿಸೂಚನೆ ಸಂಖ್ಯೆ: ಲೋಇ 100 ಸೇಸ ಎ 2019 (ಇ)(ಭಾಗ) ದಿನಾಂಕ: 13.11.2019
2. ಲೋಕೋಪಯೋಗಿ ಇಲಾಖೆ ಅಧಿಸೂಚನೆ ಸಂಖ್ಯೆ: ಲೋಇ 291 ಸೇಸ ಎ 2020 ದಿನಾಂಕ: 01.10.2020.
3. ಲೋಕೋಪಯೋಗಿ ಇಲಾಖೆ ಅಧಿಸೂಚನೆ ಸಂಖ್ಯೆ: ಲೋಇ 583 ಸೇಸ ಎ 2020 ದಿನಾಂಕ: 10.09.2020
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 272 ಎಸ್ ಎಸ್ ಕೆ 2020 ದಿನಾಂಕ: 20.11.2020.
5. ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ 77 ಇಎನ್‌ಕ್ಯೂ 2020 ದಿನಾಂಕ: 09.02.2021
6. ಶ್ರೀ ಎಂ.ಮಹದೇವಸ್ವಾಮಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಇವರ ಲಿಖಿತ ಹೇಳಿಕೆ ದಿನಾಂಕ: 05.04.2021
7. ಶ್ರೀ ರಘುನಾಥಮೂರ್ತಿ ಬಿ.ಪಿ. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಇವರ ಲಿಖಿತ ಹೇಳಿಕೆ ದಿನಾಂಕ 02.11.2021.

**ಪ್ರಸ್ತಾವನೆ:**

ಲೋಕೋಪಯೋಗಿ ಇಲಾಖೆಯು ಮೇಲೆ ಓದಲಾದ ಕ್ರಮಸಂಖ್ಯೆ:(1), (2) ಮತ್ತು (3) ರ ಅಧಿಸೂಚನೆಗಳಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳಾದ ಶ್ರೀ ಎಂ.ಮಹದೇವಸ್ವಾಮಿ, ಶ್ರೀ ರಘುನಾಥಮೂರ್ತಿ ಬಿ.ಪಿ ಹಾಗೂ ಶ್ರೀ ಎನ್.ಎಸ್.ಕೇರೂರ ಇವರುಗಳ ಸೇವೆಯನ್ನು ಮುಂದಿನ ಸ್ಥಳನಿಯುಕ್ತಿಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯುತ್ ರಾಜ್ ಇಲಾಖೆಯ ವಶಕ್ಕೆ ನೀಡಿತ್ತು. ಅದನ್ನನುಸರಿಸಿ ಮೇಲೆ ಓದಲಾದ ಕ್ರಮಸಂಖ್ಯೆ(4)ರ ಅಧಿಸೂಚನೆಯಲ್ಲಿ ಈ ಕೆಳಕಂಡ ಹುದ್ದೆಗಳಿಗೆ ಸ್ಥಳನಿಯುಕ್ತಿಗೊಳಿಸಲಾಗಿತ್ತು.

| ಕ್ರ.ಸಂ | ಅಧಿಕಾರಿ ಹೆಸರು | ಸ್ಥಳನಿಯುಕ್ತಿಗೊಳಿಸಿದ ಹುದ್ದೆ |
|---|---|---|
| 1 | ಶ್ರೀ ಎಂ.ಮಹದೇವಸ್ವಾಮಿ, | ಗ್ರಾ.ಕು.ನೀ.& ನೈ.ಉಪ ವಿಭಾಗ, ಹುಬ್ಬಳ್ಳಿ |
| 2 | ಶ್ರೀ ರಘುನಾಥಮೂರ್ತಿ ಬಿ.ಪಿ | ಗ್ರಾ.ಕು.ನೀ.& ನೈ.ಉಪ ವಿಭಾಗ, ಮೂಡಿಗೆರೆ |
| 3 | ಶ್ರೀ ಎನ್.ಎಸ್.ಕೆರೂರ. | ಗ್ರಾ.ಕು.ನೀ.& ನೈ.ಉಪ ವಿಭಾಗ, ಶಿರಸಿ |

ಮೇಲ್ಕಂಡ ಅಧಿಕಾರಿಗಳು ಸ್ಥಳನಿಯುಕ್ತಿಗೊಳಿಸಿದ ಹುದ್ದೆಗಳಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಸರ್ಕಾರದ ಆದೇಶವನ್ನು ಉಲ್ಲಂಘಿಸಿದ್ದರಿಂದ ಸದರಿಯವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳ ನಿಯಮ 12ರನ್ವಯ ಶಿಸ್ತುಕ್ರಮ ಕೈಗೊಳ್ಳಲು ನಿರ್ಣಯಿಸಿ ಮೇಲೆ ಓದಲಾದ ಕ್ರಮಸಂಖ್ಯೆ: 5 ರ ದಿನಾಂಕ: 09.02.2021 ರಂದು ಕಾರಣ ಕೇಳುವ ನೋಟೀಸ್ ನೊಂದಿಗೆ ಆರೋಪ ಪಟ್ಟಿ ಜಾರಿ ಮಾಡಲಾಗಿರುತ್ತದೆ.

ಸರ್ಕಾರದ ಕಾರಣ ಕೇಳುವ ನೋಟೀಸಿಗೆ ಪ್ರತಿಯಾಗಿ ಮೇಲೆ ಓದಲಾದ ಕ್ರಮಸಂಖ್ಯೆ: 6 ಮತ್ತು 7 ರಲ್ಲಿ ಶ್ರೀ ಎಂ.ಮಹದೇವಸ್ವಾಮಿ, ಶ್ರೀ ರಘುನಾಥಮೂರ್ತಿ ಬಿ.ಪಿ ಇವರುಗಳು ತಮ್ಮ ಲಿಖಿತ ಹೇಳಿಕೆ ಸಲ್ಲಿಸಿದ್ದು, ಶ್ರೀ ಎನ್.ಎಸ್..ಕೆರೂರ ಇವರು ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಸದರಿಯವರ ವಿವರಗಳು ಕೆಳಕಂಡಂತಿವೆ:

**ಶ್ರೀ ಮಹದೇವಸ್ವಾಮಿ, ಸ.ಕಾ.ಇಂ.:.** ಸದರಿಯವರು ತಮ್ಮ ಲಿಖಿತ ಹೇಳಿಕೆಯಲ್ಲಿ ತಮಗೆ ದಿ: 05.04.2021 ರಲ್ಲಿ ತಮ್ಮ ತಾಯಿಯವರ ಅನಾರೋಗ್ಯದ ಕಾರಣ ನೀಡಿ ಲಿಖಿತ ಹೇಳಿಕೆ ಸಲ್ಲಿಸಲು

ಒಂದು ತಿಂಗಳ ಕಾಲಾವಕಾಶ ಕೋರಿದ್ದರು. ತದನಂತರವು ಸಹ ಸದರಿಯವರು ಯಾವುದೇ ಲೀಖಿತ ಸಮಜಾಯಿಷಿ ಸಲ್ಲಿಸಿರುವುದಿಲ್ಲ.

**ಶ್ರೀ ರಘುನಾಥಮೂರ್ತಿ ಬಿ.ಪಿ. ಸ.ಕಾ.ಇಂ.:** ಸದರಿಯವರು ತಮ್ಮ ಲಿಖಿತ ಹೇಳಿಕೆಯಲ್ಲಿ ದಿನಾಂಕ: 20.11.2020 ರ ಅಧಿಸೂಚನೆಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಮೂಡಿಗೆರೆ ಇಲ್ಲಿಗೆ ಸ್ಥಳ ನಿಯುಕ್ತಿಗೊಳಿಸಲಾಗಿದ್ದ ಪ್ರತಿಯು ಸಿಕ್ಕಿರುವುದಿಲ್ಲವೆಂದು ಸದರಿಯವರು ದಿನಾಂಕ: 03.02.2021 ರ ಅಧಿಸೂಚನೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಗುಡಿಬಂಡೆ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿದ ಪ್ರತಿ ನೋಡಿದ ಮೇಲೆ ಈ ಹಿಂದೆ ಸ್ಥಳ ನಿಯುಕ್ತಿಗೊಳಿಸದ ಬಗ್ಗೆ ತಿಳಿದುಬಂದಿರುತ್ತದೆ. ಸದರಿ ಆದೇಶದಂತೆ ಪಂ.ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಗುಡಿಬಂಡೆ ಇಲ್ಲಿನ ಸ.ಕಾ.ಇಂ. ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ಹಾಗಾಗಿ ತಮ್ಮ ವಿರುದ್ಧದ ಶಿಸ್ತು ಕ್ರಮ ಕೈ ಬಿಡುವಂತೆ ಕೋರಿರುತ್ತಾರೆ,

**ಶ್ರೀ ಎನ್.ಎಸ್.ಕೆರೂರ. ಸ.ಕಾ.ಇಂ.** : ಇವರು ಕಾರಣ ಕೇಳುವ ನೋಟಿಸಿಗೆ ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಸದರಿಯವರ ಪ್ರತಿವಾದ ಇಲ್ಲವೆಂದು ಭಾವಿಸಲಾಗುತ್ತದೆ.

ಸರ್ಕಾರವು ಮೇಲ್ಕಂಡ ಅಧಿಕಾರಿಗಳು ಸಲ್ಲಿಸಿದ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿರುತ್ತದೆ. ಶ್ರೀ ರಘುನಾಥಮೂರ್ತಿ ಬಿ.ಪಿ, ಸ.ಕಾ.ಇಂ ಸದರಿಯವರನ್ನು ದಿನಾಂಕ: 03.02.2021 ರ ಅಧಿಸೂಚನೆಯಲ್ಲಿ ಗ್ರಾ.ಕು.ನೀ.& ನೈ.ಉಪ ವಿಭಾಗ, ಶೃಂಗೇರಿ ಇಲ್ಲಿಗೆ ಸ್ಥಳನಿಯುಕ್ತಿಗೊಳಿಸಿದ್ದನ್ನು ಮಾರ್ಪಡಿಸಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಗುಡಿಬಂಡೆ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಲಾಗಿರುತ್ತದೆ. ಹಾಗಾಗಿ ಸದರಿಯವರು ತಿಳಿಸಿರುವಂತೆ ಅವರಿಗೆ ಸ್ಥಳನಿಯುಕ್ತಿಗೊಳಿಸಿದ ದಿ: 20.11.2020 ರ ಆದೇಶದ ಪ್ರತಿ ಸಿಕ್ಕಿರುವುದಿಲ್ಲವೆಂಬುದನ್ನು ಹಾಗೂ ಶ್ರೀ ಎಂ.ಮಹದೇವಸ್ವಾಮಿ. ಸ.ಕಾ.ಇಂ. ಇವರು ತಮ್ಮ ಲಿಖಿತಹೇಳಿಕೆಯಲ್ಲಿ ತಮ್ಮ ತಾಯಿಯವರ ಅನಾರೋಗ್ಯದ ಕಾರಣ ನೀಡಿ ಒಂದು ತಿಂಗಳ ಕಾಲಾವಕಾಶ ಕೋರಿದ್ದು, ತದನಂತರವು ಯಾವುದೇ ಲೀಖಿತ ಹೇಳಿಕೆ ಸಲ್ಲಿಸಿರುವುದಿಲ್ಲ. ಗ್ರಾ.ಅ.ಪಂ.ರಾಜ್ ಇಲಾಖೆಯು ಅತ್ಯಾವಶ್ಯಕ ಸೇವೆ ಒದಗಿಸುವ ಇಲಾಖೆಗಳಲ್ಲಿ ಒಂದಾಗಿರುವುದರಿಂದ ಅವರುಗಳ ಲಿಖಿತ ಹೇಳಿಕೆಯಲ್ಲಿನ ಅಂಶಗಳು ಪರಿಗಣನೆಗೆ ಅರ್ಹವಾಗಿರುವುದಿಲ್ಲ. ಶ್ರೀ ಎನ್.ಎಸ್.ಕೆರೂರ ಇವರು ಯಾವುದೇ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿರುವುದಿಲ್ಲ.

ಸರ್ಕಾರಿ ನೌಕರರುಗಳು ಸರ್ಕಾರವು ನೇಮಿಸಿದ ಸ್ಥಳಗಳಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು ಅವರ ಆದ್ಯ ಕರ್ತವ್ಯವಾಗಿರುತ್ತದೆ. ಆದರೆ, ಶ್ರೀ ಎಂ.ಮಹದೇವಸ್ವಾಮಿ, ಶ್ರೀ ರಘುನಾಥಮೂರ್ತಿ ಬಿ.ಪಿ ಹಾಗೂ ಶ್ರೀ ಎನ್.ಎಸ್..ಕೆರೂರ ., ಇವರುಗಳು ಸ್ಥಳನಿಯುಕ್ತಿಗೊಳಿಸಿದ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾಗದೇ ಸರ್ಕಾರದಿಂದ ಹೊರಡಿಸಿದ ಆದೇಶವನ್ನು ಉಲ್ಲಂಘಿಸಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ತೀವ್ರತರನಾದ ಕರ್ತವ್ಯಲೋಪವೆಸಗಿರುವುದು ಸ್ಪಷ್ಟವಾಗುವುದರಿಂದ ಸದರಿಯವರು ಎಸಗಿರುವ ಕರ್ತವ್ಯಲೋಪಕ್ಕನುಗುಣವಾಗಿ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಧರಿಸಿರುತ್ತದೆ. ಆದುದರಿಂದ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 77 ಇಎನ್ ಕ್ಯೂ 2020</u>**
**<u>ಬೆಂಗಳೂರು ದಿನಾಂಕ:12.01.2022</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರವು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳಾದ ಶ್ರೀ ಎಂ.ಮಹದೇವಸ್ವಾಮಿ, ಶ್ರೀ ರಘುನಾಥಮೂರ್ತಿ ಬಿ.ಪಿ ಹಾಗೂ ಶ್ರೀ ಎನ್ .ಎಸ್..ಕೆರೂರ ಇವರುಗಳು ಎಸಗಿರುವ ಕರ್ತವ್ಯಲೋಪಕ್ಕೆ ಅನುಗುಣವಾಗಿ ಕರ್ನಾಟಕ ನಾಗರೀಕ

ಸೇವಾ(ವ.ನಿ.ಮೇ) ನಿಯಮಗಳು, 1957ರ ನಿಯಮ 8(iii))ರನ್ವಯ ಸದರಿಯವರುಗಳ ಕಾಲಿಕ ವೇತನ ಶ್ರೇಣಿಯಲ್ಲಿ ಒಂದು ವಾರ್ಷಿಕ ಬಡ್ತಿಯನ್ನು ಸಂಚಿತ ಪರಿಣಾಮ ಹೊಂದುವಂತೆ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಕೆ. ನದೀಮ್ 12/1/22

**(ಕೆ. ನದೀಮ್ ಅಹ್ಮದ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

12/1/22

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ, ಮಂಡ್ಯ
4. ಶ್ರೀ ರಘುನಾಥಮೂರ್ತಿ ಬಿ.ಪಿ, ಸ.ಕಾ.ಇಂ. ಪಂ.ರಾ.ಇಂ. ಉಪ ವಿಭಾಗ, ಗುಡಿಬಂಡೆ-ಇವರಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಇವರ ಮುಖಾಂತರ.
5. ಶ್ರೀ ಎನ್.ಎಸ್.ಕೆರೂರ. ಹಾಗೂ ಶ್ರೀ ಎಂ.ಮಹದೇವಸ್ವಾಮಿ ಸ.ಕಾ.ಇಂ. ಇವರುಗಳಿಗೆ-ಸರ್ಕಾರದ ಅಧೀನ ಕಾರ್ಯದರ್ಶಿ ಲೋಕೋಪಯೋಗಿ ಇಲಾಖೆ (ಸೇವೆಗಳು-ಎ) ಇವರ ಮುಖಾಂತರ.
6. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
7. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿ (ಆಡಳಿತ-1) ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು.
8. ಸರ್ಕಾರದ ಅಧೀನ ಕಾರ್ಯದರ್ಶಿ,ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಸೇವೆಗಳು-ಎ ಮತ್ತು ಸಿ)
9. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್ ಸೈಟ್ ನಲ್ಲಿ ಪ್ರಕಟಿಸುವ ಸಲುವಾಗಿ.
10. ಶಾಖಾ ರಕ್ಷಾ ಕಡತ / ಹೆಚ್ಚುವರು ಪ್ರತಿಗಳು.